ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:38/2019
ಸಿ.ಡಬ್ಲ್ಯು.14 ಪಿ.ಡಬ್ಲ್ಯೂ : 2

ಸಾಕ್ಷಿದಾರರ ಹೆಸರು ಗೋಪಾಲಕೃಷ್ಣ
ತಂದೆಯ ಹೆಸರು ಜಿ. ನಾರಾಯಣ್
ವಯಸ್ಸು 65 ವರ್ಷ
ಉದ್ಯೋಗ ನಿವೃತ್ತ ಪಿ.ಎಸ್.ಐ.
ವಾಸಸ್ಥಳ ಆದಿ ಉಡುಪಿ.

ದಿನಾಂಕಃ 05.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ದ.ಪ್ರ.ಸಂ. 299 ರಡಿಯಲ್ಲಿನ ವಿಚಾರಣೆಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ದಿನಾಂಕ 18.04.2016 ರಿಂದ ದಿನಾಂಕ 19.07.2017 ರವರೆಗೆ ಮಣಿಪಾಲ ಪೋಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕನಾಗಿ ಸೇವೆಯನ್ನು ಸಲ್ಲಿಸಿರುತ್ತೇನೆ. ದಿನಾಂಕ 25.04.2016 ರಂದು ಈ ಪ್ರಕರಣದ ಕಡತವನ್ನು ಚಾ.ಸಾ.13 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ತನಿಖೆಯನ್ನು ಮುಂದುವರೆಸಿ ಡಿ.ಸಿ. ಕಚೇರಿಯ ರಸ್ತೆಯಲ್ಲಿರುವಂತಹ ಕ್ವಿನ್ಸ್ ಡೈಲಿ ನೀಡ್ಸ್ ಮತ್ತು ಸೂಪರ್ ಮಾರ್ಕೆಟ್ ಅಂಗಡಿಗೆ ಭೇಟಿ ಕೊಟ್ಟೆನು. ಆ ಸಮಯದಲ್ಲಿ ಚಾ.ಸಾ.1 ರವರು ಹಾಜರಿದ್ದು, ಇದೇ ಸ್ಥಳದಲ್ಲಿ ಕಳ್ಳತನವಾಗಿದೆ ಎಂದು ತೋರಿಸಿದರು. ಅದೇ ವೇಳೆ ಚಾ.ಸಾ.3 ಮತ್ತು 4 ರವರು ಹಾಜರಿದ್ದರು. ಮಧ್ಯಾಹ್ನ 1.30 ರಿಂದ 2.15 ರ ವರೆಗೆ ಪಂಚನಾಮೆಯನ್ನು ಜರುಗಿಸಿದೆನು. ನಾನು ಹೇಳಿದ ರೀತಿಯಲ್ಲಿ ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಅದೇ ಸಮಯದಲ್ಲಿ ಅಲ್ಲಿಗೆ ಬಂದಿದ್ದರು. ಬೆರಳಚ್ಚು ತಜ್ಞರು ನಗದು ಕೌಂಟರ್ ನಲ್ಲಿ ಇದ್ದ ಹಣ ಇಡುವ ಪ್ಲಾಸ್ಟಿಕ್ ಡಬ್ಬಿಯನ್ನು ಪರಿಶೀಲಿಸಿ ಅದರಲ್ಲಿ ಸಂಶಯದಿಂದ ಕೂಡಿರುವ ಬೆರಳ್ಚು ಮುದ್ರೆ ಇದೆ ಎಂದು ತಿಳಿಸಿದರು. ಚಾ.ಸಾ.1 ರವರು ಪ್ಲಾಸ್ಟಿಕ್ ಡಬ್ಬಿಯಲ್ಲಿದ್ದ ಹಣವು ಕಳ್ಳತನವಾಗಿದೆ ಎಂದು ತಿಳಿಸಿದರು. ಚಾ.ಸಾ.3 ಮತ್ತು 4 ರವರ ಹಾಜರಿಯಲ್ಲಿ ಪ್ಲಾಸ್ಟಿಕ್ ಡಬ್ಬಿಯನ್ನು ಜಪ್ತುಮಾಡಿಕೊಂಡರು. ಅದೇ ವೇಳೆ ಘಟನಾ ಸ್ಥಳದ ಭಾವಚಿತ್ರವನ್ನು ತೆಗೆಸಿದೆನು. ಸಾಕ್ಷಿಯವರು ಸ್ಥಳ ಪಂಚನಾಮೆ ಮತ್ತು ಭಾವಚಿತ್ರವನ್ನು ನೋಡಿ ಗುರ್ತಿಸಿರುತ್ತಾರೆ. ಸ್ಥಳ ಪಂಚನಾಮೆ ಮತ್ತು ಭಾವಚಿತ್ರದ ಮೂಲಪ್ರತಿಯನ್ನು ಸಿಸಿ 68/2017 ರಲ್ಲಿ ಸಲ್ಲಿಸಲಾಗಿರುತ್ತದೆ. ಸ್ಥಳ ಪಂಚನಾಮೆಯ ಯಥಾ ಪ್ರತಿಯನ್ನು

ಈಗಾಗಲೇ ನಿಪಿ.2 ಎಂದು ಗುರ್ತಿಸಲಾಗಿದೆ. ಭಾವಚಿತ್ರದ ಯಥಾ ಪ್ರತಿಯನ್ನು ನಿಪಿ.3 ಎಂದು ಗುರ್ತಿಸಲಾಯಿತು. ಅದೇ ವೇಳೆ ಚಾ.ಸಾ.2 ರಿಂದ 4 ರವರ ಹೇಳಿಕೆಯನ್ನು ದಾಖಲಿಸಿಕೊಂಡೆನು.

ನಂತರ ಠಾಣೆಗೆ ಹಿಂದಿರುಗಿ ಠಾಣಾ ಸ್ವತ್ತು ಪಟ್ಟಿ ಸಂಖ್ಯೆ 72/2016 ರಲ್ಲಿ ಜಪ್ತುಪಡಿಸಿಕೊಂಡ ವಸ್ತುಗಳ ಬಗ್ಗೆ ನಮೂದಿಸಿ ಮನವಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿದೆನು. ನ್ಯಾಯಾಲಯದ ಅನುಮತಿಯನ್ನು ಪಡೆದು, ದಿನಾಂಕ 26.04.2016 ರಂದು ಚಾ.ಸಾ.11 ರವರ ಮೂಲಕ ಉಡುಪಿಯ ಬೆರಳಚ್ಚು ಘಟಕಕ್ಕೆ ಪರಿಶೀಲಿಸಿ ವರದಿ ನೀಡುವಂತೆ ಕೋರಿ ಕಳುಹಿಸಿಕೊಟ್ಟೆನು. ದಿನಾಂಕ 27.04.2016 ರಂದು ಗುನ್ನಾ ಸಂಖ್ಯೆ 127/2016 ರಲ್ಲಿ ದಸ್ತಗಿರಿ ಮಾಡಲ್ಪಟ್ಟ ಆರೋಪಿತರು ಈ ಪ್ರಕರಣದ ಕಳ್ಳತನವನ್ನು ಸಹ ಮಾಡಿರುತ್ತಾರೆಂದು ಅವರ ಸ್ವಇಚ್ಛಾ ಹೇಳಿಕೆಯಿಂದ ಕಂಡುಬಂದಿತು. ಸದ್ರಿ ಗುನ್ನಾ ಸಂಖ್ಯೆ 127/2016 ರಲ್ಲಿ ಜಪ್ತುಪಡಿಸಿಕೊಳ್ಳಲಾದ ನಗದು ಹಣ 7,500/- ರೂಪಾಯಿಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದು ಕಂಡುಬಂದಿತು. ಸದ್ರಿ ಹಣವನ್ನು ಈ ಪ್ರಕಣಕ್ಕೆ ವರ್ಗಾಯಿಸಲು ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿ ಅನುಮತಿಯನ್ನು ಪಡೆದುಕೊಂಡೆನು. ನ್ಯಾಯಾಲಯದ ಮೇರೆಗೆ ದಿನಾಂಕ 28.04.2016 ರಂದು ಪಿ.ಎಫ್.77/2016 ರಲ್ಲಿ ನಗದು ಹಣದ ಬಗ್ಗೆ ನಮೂದಿಸಿ ಮುಂದಿನ ಕ್ರಮಕ್ಕಾಗಿ ನ್ಯಾಯಾಲಯಕ್ಕೆ ಸಲ್ಲಿಸಿದೆನು. ದಿನಾಂಕ 27.04.2016 ರಂದು ಚಾ.ಸಾ.1 ರಿಂದ 4 ರವರನ್ನು ಠಾಣೆಗೆ ಬರುವಂತೆ ಸೂಚಿಸಿದೆನು. ಅವರು ಠಾಣೆಗೆ ಹಾಜರಾಗಿ ಆರೋಪಿತರನ್ನು ಹಾಗೂ ಹಣವನ್ನು ಗುರ್ತಿಸಿದ್ದು ಅವುಗಳಿಗೆ ಸಂಬಂಧಿಸಿದಂತೆ ಅವರ ಮುಂದುವರೆದ ಹೇಳಿಕೆಯನ್ನು ದಾಖಲಿಸಿಕೊಂಡೆನು. ಆರೋಪಿತರ ಸ್ವಇಚ್ಛಾ ಹೇಳಿಕೆಯಲ್ಲಿ ಅವರು 4 ಪ್ರಕರಣಗಳಲ್ಲಿ ಆರೋಪಿತರು ಎನ್ನುವುದು ಕಂಡುಬಂದಿತು. ಆರೋಪಿತರು ಅವರ ಸ್ವಇಚ್ಛಾ ಹೇಳಿಕೆಗಳಲ್ಲಿ ಕೃತ್ಯವೆಸಗಿರುತ್ತೇವೆಂದು ಹೇಳಿದ 4 ಸ್ಥಳಗಳಿಗೆ ಚಾ.ಸಾ.5 ಮತ್ತು 6 ರವರೊಂದಿಗೆ ಕರೆದುಕೊಂಡು ಹೋದೆನು. ಆರೋಪಿತರು ತೋರಿಸಿದಂತಹ ಸ್ಥಳದಲ್ಲಿ ಚಾ.ಸಾ.5 ಮತ್ತು 6 ರವರ ಹಾಜರಿಯಲ್ಲಿ 8.45 ರಿಂದ 11.15 ರವರೆಗೆ ಪಂಚನಾಮೆಯನ್ನು ಜರುಗಿಸಿದೆನು. ಸಾಕ್ಷಿಯವರು ಪಂಚನಾಮೆಯನ್ನು ನೋಡಿ ಗುರ್ತಿಸಿದ್ದು, ಮೂಲ

ಪ್ರತಿಯನ್ನು ಗುನ್ನಾ ಸಂಖ್ಯೆ 127/2016 ರಲ್ಲಿ ಸಲ್ಲಿಸಲಾಗಿರುತ್ತದೆ, ಆದ್ದರಿಂದ ಅದರ ದೃಢೀಕೃತ ನಕಲನ್ನು ನಿಪಿ.4 ಎಂದು ಗುರ್ತಿಸಲಾಯಿತು. ಸಾಕ್ಷಿಯವರು ಭಾವಚಿತ್ರವನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ.5 ಎಂದು ಗುರ್ತಿಸಲಾಯಿತು. ಆರೋಪಿತರ ಯುಟಿಪಿ ನಂಬರ್ ನ್ನು ಪಡೆದುಕೊಂಡು ಬಾಡಿ ವಾರೆಂಟ್ ನೀಡುವಂತೆ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿದೆನು. ಗುನ್ನಾ ಸಂಖ್ಯೆ 127/2016 ರಲ್ಲಿನ ಆರೋಪಿತರ ದಸ್ತಗಿರಿ ಪಂಚನಾಮೆ, ಆರೋಪಿತರ ಸ್ವಇಚ್ಛಾ ಹೇಳಿಕೆಗಳು, ಸ್ವತ್ತು ಅಮಾನತ್ತು ಪಂಚನಾಮೆ, ಕಾರಿನ ಭಾವಚಿತ್ರಗಳು, ರಾಡು, ದೊಣ್ಣೆ ಹಾಗೂ ಸ್ಕ್ರೂ ಡ್ರೈವರ್ ಗೆ ಸಂಬಂಧಿಸಿದ ಭಾವಚಿತ್ರಗಳನ್ನು ಪಡೆದುಕೊಂಡು ಈ ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡೆನು. ದಸ್ತಗಿರಿ ಪಂಚನಾಮೆಯನ್ನು ನಿಪಿ.6 ಎಂದು, ಮೋಹನ್ ರವರ ಸ್ವಇಚ್ಛಾ ಹೇಳಿಕೆ ಯಥಾ ಪ್ರತಿಯನ್ನು ನಿಪಿ.7 ಎಂದು, ಗಂಗಾಧರ್ ರವರ ಸ್ವಇಚ್ಛಾ ಹೇಳಿಕೆಯ ಯಥಾ ಪ್ರತಿಯನ್ನು ನಿಪಿ.8 ಎಂದು, ನಾರಾಯಣಸ್ವಾಮಿಯವರ ಸ್ವಇಚ್ಛಾ ಹೇಳಿಕೆಯ ಯಥಾ ಪ್ರತಿಯನ್ನು ನಿಪಿ.9 ಎಂದು, ಶ್ರೀನಿವಾಸರವರ ಸ್ವಇಚ್ಛಾ ಹೇಳಿಕೆಯ ಯಥಾ ಪ್ರತಿಯನ್ನು ನಿಪಿ.10 ಎಂದು, ಸ್ವತ್ತು ಸ್ವಾಧೀನ ಪಂಚನಾಮೆಯ ಯಥಾ ಪ್ರತಿಯನ್ನು ನಿಪಿ.11 ಎಂದು, ಕಾರಿಗೆ ಸಂಬಂಧಿಸಿದ 4 ಭಾವಚಿತ್ರಗಳ ಹೇಳಿಕೆಯ ಯಥಾ ಪ್ರತಿಗಳನ್ನು ಕ್ರಮವಾಗಿ ನಿಪಿ.11 ರಿಂದ ನಿಪಿ.14 ಎಂದು, ರಾಡುಗಳು, ದೊಣ್ಣೆಗಳು ಹಾಗೂ ಸ್ಕ್ರೂ ಡ್ರೈವರ್ ಗೆ ಸಂಬಂಧಿಸಿದ ಭಾವಚಿತ್ರವನ್ನು ನಿಪಿ.15 ಎಂದು ಗುರ್ತಿಸಲಾಯಿತು. ದಿನಾಂಕ 15.06.2016 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಅಪರಾಧವು ಮೇಲ್ನೋಟಕ್ಕೆ ಕಂಡು ಬಂದ ಕಾರಣ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿ ನ್ಯಾಯಾಲಯಕ್ಕೆ ಸಲ್ಲಿಸಿದೆನು. ದಸ್ತಗಿರಿ ಮಾಡಿದ ಆರೋಪಿತರನ್ನು ಅವರಿಂದ ಜಪ್ತುಪಡಿಸಿಕೊಂಡಿದ್ದ ವಸ್ತುಗಳನ್ನು ನೋಡಿದರೆ ಗುರ್ತಿಸಬಲ್ಲೆನು.

ದ.ಪ್ರ.ಸಂ.299 ರಡಿಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ. ಮತ್ತು ಎಸಿಜೆಎಂ ಉಡುಪಿ.